# <u>ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು</u>

**ದಿನಾಂಕ 25.09.2017 ರಂದು ಪೂರ್ವಾಹ್ನ 11.00 ಗಂಟೆಗೆ ಡಾ. ಶಿವರಾಮ ಕಾರಂತ ಸಭಾ ಭವನದಲ್ಲಿ ಕಾಲೇಜಿನ ೧೫೦ನೇ ವರ್ಷಾಚರಣೆ ಬಗ್ಗೆ ರೂಪುರೇಷೆ ತಯಾರಿಸುವ ಸಲುವಾಗಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು, ಕಾಲೇಜಿನ ಹಳೆ ವಿದ್ಯಾರ್ಥಿಗಳು ಹಾಗೂ ಗಣ್ಯರ ಜೊತೆ ನಡೆದ ಪ್ರಥಮ ಪೂರ್ವಭಾವಿ ಸಭೆಯ ನಡಾವಳಿಗಳು.**

**<u>ಉಪಸ್ಥಿತರು:</u>**

1. ಡಾ. ಎಂ. ವೀರಪ್ಪ ಮೊಯಿಲಿ, ಮಾಜಿ ಮುಖ್ಯ ಮಂತ್ರಿಗಳು ಹಾಗೂ ಹಳೆ ವಿದ್ಯಾರ್ಥಿ ವಿ.ವಿ.ಕಾಲೇಜು.
2. ಶ್ರೀ ಬಿ. ರಮಾನಾಥ ರೈ, ಸಚಿವರು ಹಾಗೂ ಹಳೆ ವಿದ್ಯಾರ್ಥಿ, ವಿಶ್ವವಿದ್ಯಾನಿಲಯ ಕಾಲೇಜು.
3. ಶ್ರೀ ಜೆ. ಆರ್. ಲೋಬೋ, ಶಾಸಕರು, ಮಂಗಳೂರು.
4. ಪ್ರೊ. ಕೆ. ಭೈರಪ್ಪ, ಮಾನ್ಯ ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ.
5. ಪ್ರೊ. ಕೆ. ಎಂ. ಲೋಕೇಶ್, ಕುಲಸಚಿವರು, "" ""
6. ಪ್ರೊ. ಟಿ.ಪಿ. ಎಂ. ಪಕ್ಕಳ, ಪ್ರಾಧ್ಯಾಪಕರು "" ""
7. ಡಾ. ನಾಗಪ್ಪ ಗೌಡ, ಸಹ ಪ್ರಾಧ್ಯಾಪಕರು, "" ""
8. ಶ್ರೀ ಪ್ರಸನ್ನ ಕುಮಾರ್ ರೈ, ಸಿಂಡಿಕೇಟ್ ಸದಸ್ಯರು, ಮಂಗಳೂರು ವಿಶ್ವವಿದ್ಯಾನಿಲಯ
9. ಶ್ರೀ ಮೋಹನಚಂದ್ರ ನಂಬಿಯಾರ್, "" ""
10. ಶ್ರೀ ಪಿ. ವಿ. ಮೋಹನ್, ಹಳೆ ವಿದ್ಯಾರ್ಥಿ ಹಾಗೂ ಮಾಜಿ ಸಿಂಡಿಕೇಟ್ ಸದಸ್ಯರು, ಮಂವಿ.ವಿ.
11. ಶ್ರೀ ದಿನೇಶ್ ಕುಮಾರ್ ಆಳ್ವ, "" ""
12. ಡಾ. ಉದಯ ಕುಮಾರ್ ಎಂ.ಎ.ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು
13. ಡಾ. ಡಿ.ಕೆ ಚೌಟ, ಹಳೆ ವಿದ್ಯಾರ್ಥಿ, "" ""
14. ಶ್ರೀ ಭಾಸ್ಕರ ಮೊಯಿಲಿ,
15. ಶ್ರೀ ಧರ್ಮಣ್ಣ ನಾಯ್ಕ್, ಅಧ್ಯಕ್ಷರು, ಹಳೆ ವಿದ್ಯಾರ್ಥಿ ಸಂಘ ಹಾಗೂ ಸಂಘದ ಇತರ ಸದಸ್ಯರು
16. ಶ್ರೀಮತಿ ಅನುಪಮ ಅನಂತಮೂರ್ತಿ, ಅಧ್ಯಕ್ಷರು, ಶಿಕ್ಷಕ ರಕ್ಷಕ ಸಂಘ, ಹಾಗೂ ಸಂಘದ ಇತರ ಸದಸ್ಯರು
17. ಶ್ರೀ ಆರ್. ಪಿ. ನಾಯಕ್, ಅಧ್ಯಕ್ಷರು, ಕರ್ನಾಟಕ ಕೊಂಕಣಿ ಅಕಾಡೆಮಿ, ಮಂಗಳೂರು
18. ಡಾ. ಅಮ್ಮಾಳು ಕುಟ್ಟಿ– ಮುಖ್ಯಸ್ಥರು (ಆಂಗ್ಲ ವಿಭಾಗ), ಡಾ. ರತ್ನಾವತಿ–ಮುಖ್ಯಸ್ಥರು (ಕನ್ನಡ ವಿಭಾಗ), ಡಾ. ನಾಗರತ್ನ ಎನ್.ರಾವ್ – ಸಂಯೋಜಕರು, (ಸ್ನಾ.ಹಿಂದಿ ವಿಭಾಗ), ಡಾ. ಎ. ಕುಮಾರ ಸುಬ್ರಹ್ಮಣ್ಯ ಭಟ್– ಮುಖ್ಯಸ್ಥರು (ಸಂಸ್ಕೃತ ವಿಭಾಗ), ಶ್ರೀಮತಿ ಸಿ. ರಾಜೇಶ್ವರಿ–ಮುಖ್ಯಸ್ಥರು (ಇತಿಹಾಸ ವಿಭಾಗ), ಡಾ. ಜಯವಂತ ನಾಯಕ್–ಮುಖ್ಯಸ್ಥರು (ಅರ್ಥಶಾಸ್ತ್ರ ವಿಭಾಗ), ಡಾ. ಲತಾ ಎ. ಪಂಡಿತ್– ಮುಖ್ಯಸ್ಥರು (ರಾಜ್ಯಶಾಸ್ತ್ರ ವಿಭಾಗ), ಶ್ರೀಮತಿ ಮಹೇಂದ್ರ ಮಣಿ ರಾವ್–ಮುಖ್ಯಸ್ಥರು (ಸಮಾಜಶಾಸ್ತ್ರ ವಿಭಾಗ), ಡಾ. ಡಿ.ಪಿ. ಅಂಗಡಿ–ಮುಖ್ಯಸ್ಥರು (ಭೂಗೋಳ ಶಾಸ್ತ್ರ ವಿಭಾಗ), ಡಾ. ಎ. ಹರೀಶ– ಮುಖ್ಯಸ್ಥರು (ಭೌತಶಾಸ್ತ್ರ ವಿಭಾಗ), ಡಾ. ಕೆ. ಎಂ. ಉಷಾ–ಮುಖ್ಯಸ್ಥರು (ರಸಾಯನಶಾಸ್ತ್ರ ವಿಭಾಗ), ಡಾ. ಕೆ. ಲಕ್ಷ್ಮಣ್–ಸಂಯೋಜಕರು, ಸ್ನಾ.ರಸಾಯನಶಾಸ್ತ್ರ ವಿಭಾಗ, ಡಾ. ಯು.ವಿ. ಚೇತನ–ಮುಖ್ಯಸ್ಥರು (ಗಣಿತಶಾಸ್ತ್ರ ವಿಭಾಗ), ಡಾ. ವೀರಭದ್ರಪ್ಪ–ಮುಖ್ಯಸ್ಥರು (ಗಣಕ ವಿಜ್ಞಾನ ವಿಭಾಗ), ಶ್ರೀಮತಿ ಗೀತಾ–ಮುಖ್ಯಸ್ಥರು (ಪ್ರಾಣಿಶಾಸ್ತ್ರ ವಿಭಾಗ), ಡಾ. ಭಾರತಿ ಪ್ರಕಾಶ್–ಮುಖ್ಯಸ್ಥರು (ಸೂಕ್ಷ್ಮಾಣು ಜೀವಶಾಸ್ತ್ರ ವಿಭಾಗ), ಶ್ರೀಮತಿ ಸುನಂದಾ ಯು–ಮುಖ್ಯಸ್ಥರು

(ವಾಣಿಜ್ಯ ವಿಭಾಗ), ಶ್ರೀ ದಯಾಕರ್ ಬಿ.–ಮುಖ್ಯಸ್ಥರು (ಕ್ರೀಡಾ ವಿಭಾಗ), ಡಾ. ಗಣಪತಿ ಗೌಡ–ಮುಖ್ಯಸ್ಥರು (ಪತ್ರಿಕೋದ್ಯಮ ವಿಭಾಗ), ಡಾ. ಎಂ.ಎಂ. ಮೀನಾಕ್ಷಿ–ಮುಖ್ಯಸ್ಥರು (ಪ್ರವಾಸೋದ್ಯಮ ವಿಭಾಗ), ಶ್ರೀಮತಿ ವನಜಾ, ಗ್ರಂಥಪಾಲಕಿ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು

19. ಶ್ರೀ ನಾರಾಯಣ ನಾಯರ್, ಡಾ. ಸತ್ಯನಾರಾಯಣ ಮಲ್ಲಿಪಟ್ನ, ಶ್ರೀ ಬಿ. ಗೋವಿಂದ ನ್ಯಾಕ್, ಶ್ರೀ ಸೀತಾರಾಂ ಪೂಜಾರಿ, ನಿವೃತ್ತ ಪ್ರಾಂಶುಪಾಲರುಗಳು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.
20. ಶ್ರೀ ಎಸ್.ಎಸ್. ಹೂಗಾರ್, ನಿವೃತ್ತ ಶಿಕ್ಷಕರು, " " " "
21. ಶ್ರೀಮತಿ ವಿನತ ಕುಮಾರಿ. ಪಿ., ಕಚೇರಿ ಅಧೀಕ್ಷಕಿ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.

******

ವಿದ್ಯಾರ್ಥಿಗಳು ಕಾಲೇಜು ಗೀತೆಯನ್ನು ಹಾಡುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ಪ್ರಾಂಶುಪಾಲರು ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು, ಎಲ್ಲಾ ಅತಿಥಿ ಗಣ್ಯರನ್ನು, ಆಹ್ವಾನಿತರನ್ನು, ವಿವಿಧ ಅಕಾಡೆಮಿಯ ಅಧ್ಯಕ್ಷರು, ಕಾಲೇಜಿನ ಹಳೆ ವಿದ್ಯಾರ್ಥಿಗಳು, ನಿವೃತ್ತ ಪ್ರಾಂಶುಪಾಲರು, ಅಧ್ಯಾಪಕರು, ಬೋಧಕೇತರರು, ವಿದ್ಯಾರ್ಥಿ ಪ್ರತಿನಿಧಿಗಳನ್ನು, ಹಾಗೂ ಮಾಧ್ಯಮ ಮಿತ್ರರನ್ನು ಆತ್ಮೀಯವಾಗಿ ಸಭೆಗೆ ಸ್ವಾಗತಿಸಿದರು. ಅತಿಥಿಗಳಿಗೆ ಹೂಗುಚ್ಛ ನೀಡಿ ಗೌರವಿಸಲಾಯಿತು.

ಕಾಲೇಜಿನ 150ನೇ ವರ್ಷಾಚರಣೆಯ ಬಗ್ಗೆ ಪ್ರಾಸ್ತಾವಿಕ ಭಾಷಣದಲ್ಲಿ 'ಸಮಾಜದ ಎಲ್ಲಾ ವರ್ಗದ ಜನರಿಗೆ ಜ್ಞಾನದ ಕೇಂದ್ರವಾಗುವ' ಧ್ಯೇಯ ಹೊಂದಿರುವ ನಮ್ಮ ಹೆಮ್ಮೆಯ ಸರ್ಕಾರಿ ಕಾಲೇಜು (ವಿಶ್ವವಿದ್ಯಾನಿಲಯ ಕಾಲೇಜು), 1868ರಲ್ಲಿ ಆರಂಭವಾಗಿದ್ದು, 149 ವರ್ಷಗಳನ್ನು ಪೂರೈಸಿ, ಸೆಪ್ಟಂಬರ್ 2017ರಲ್ಲಿ 150ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಲಿರುವ ಈ ಚಾರಿತ್ರಿಕ ಸಂದರ್ಭದಲ್ಲಿ ಸಂಸ್ಥೆ ನಡೆದು ಬಂದ ದಾರಿಯ ಅವಲೋಕನ ಮಾಡುತ್ತಾ, ಸುಂದರ ಭವಿಷ್ಯದೆಡೆಗೆ ಸದೃಢ ಹೆಜ್ಜೆಯಿಡುವ ನಿಟ್ಟಿನಲ್ಲಿ ಕೆಲವೊಂದು ಅರ್ಥಪೂರ್ಣ ಯೋಜನೆಗಳನ್ನು ಹಮ್ಮಿಕೊಳ್ಳುವ ಬಗ್ಗೆ ಈ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದ್ದು ಈ ನಿಟ್ಟಿನಲ್ಲಿ ಸೇರಿರುವ ಎಲ್ಲರ ಸಹಕಾರವನ್ನು ಕೋರಿದರು.

ಮಾನ್ಯ ಉಸ್ತುವಾರಿ ಸಚಿವರಾದ ಶ್ರೀ ಬಿ. ರಮಾನಾಥ ರೈ ಇವರು ಕಾಲೇಜಿನ ಹಳೆ ವಿದ್ಯಾರ್ಥಿಯಾಗಿದ್ದು ಅವರು ತಮ್ಮ ಕಾಲೇಜಿನ ದಿನಗಳನ್ನು ನೆನಪಿಸುತ್ತಾ, ಈ ಕಾಲೇಜಿನ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ತಾನು ಪಿ.ಯು.ಸಿ. ವಿದ್ಯಾರ್ಥಿಯಾಗಿದ್ದು, 150ನೇ ವರ್ಷಾಚರಣೆಗೆ ಸಂಬಂಧಿಸಿದ ಈ ಸಭೆಯಲ್ಲಿ ಭಾಗವಹಿಸಲು ನನಗೆ ಬಹಳ ಸಂತೋಷವಾಗುತ್ತಿದೆ. ಓರ್ವ ಹಳೆ ವಿದ್ಯಾರ್ಥಿಯಾಗಿ ನನ್ನ ಸಂಪೂರ್ಣ ಬೆಂಬಲ ಮತ್ತು ಸಹಕಾರವನ್ನು ನೀಡುತ್ತೇನೆ ಎಂದು ತಿಳಿಸಿದರು.

ಮಾನ್ಯ ಮಂಗಳೂರು ಶಾಸಕರಾದ ಶ್ರೀಯುತ ಜೆ. ಆರ್. ಲೋಬೋರವರು ಸರಕಾರಿ ಕಾಲೇಜು ಇತಿಹಾಸದ ಒಂದು ಭಾಗವಾಗಿದ್ದು ಅತ್ಯಂತ ತೀವ್ರಗತಿಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನಡೆಸಿ ಉತ್ತಮ ಹೆಸರು ಗಳಿಸುತ್ತಿದೆ. ತಾನು ವಿದ್ಯಾರ್ಥಿಯಾಗಿದ್ದ ಸರಕಾರಿ ಕಾಲೇಜಿನ ಬಗ್ಗೆ ಜನರಲ್ಲಿ ಅಷ್ಟೊಂದು ಒಳ್ಳೆಯ ಭಾವನೆ ಇರಲಿಲ್ಲ ಈಗ ಎಷ್ಟೊಂದು ಬದಲಾಣೆಯಾಗಿದೆ ಎಂದರೆ ಈ ಕಾಲೇಜಿನಲ್ಲಿ ಪ್ರವೇಶಪಡೆಯಲು ವಿದ್ಯಾರ್ಥಿಗಳು ತುದಿಗಾಲಿನಲ್ಲಿ ನಿಂತಿರುತ್ತಾರೆ. ಅನೇಕ ರಾಜಕೀಯ ಧುರೀಣರನ್ನು, ವಿಜ್ಞಾನಿಗಳನ್ನು, ಕೈಗಾರಿಕಾ ಪರಿಣಿತರನ್ನು ಹೊರತಂದ ಈ ಕಾಲೇಜಿನ 150ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ನನ್ನ ಸಂಪೂರ್ಣ ಸಹಕಾರವನ್ನು ನೀಡುತ್ತೇನೆ ಹಾಗೂ ಎಲ್ಲರೂ ಕೈಜೋಡಿಸಿ ಈ ಸಮಾರಂಭವನ್ನು ಯಶಸ್ವಿಗೊಳಿಸೋಣ ಎಂದು ಹೇಳಿದರು.

ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಕಾಲೇಜಿನ ಹಿರಿಯ ಹಳೆ ವಿದ್ಯಾರ್ಥಿಯಾಗಿರುವ ಡಾ. ಎಂ. ವೀರಪ್ಪ ಮೊಯಿಲಿ ಇವರು ಮಾತನಾಡುತ್ತಾ, ಕಾಲೇಜಿನ ಪಾರಂಪರಿಕ ಕಟ್ಟಡ ರವೀಂದ್ರ ಕಲಾ ಭವನದ ಪುನ:ಶ್ಚೇತನಾ ಕಾರ್ಯವು ರೂ.2.5 ಕೋಟಿ ವೆಚ್ಚದಲ್ಲಿ ಯು.ಜಿ.ಸಿ. ಹಾಗೂ ವಿಶ್ವವಿದ್ಯಾನಿಲಯದ ಅನುದಾನದಿಂದ ಶೀಘ್ರಗತಿಯಲ್ಲಿ ನಡೆಯುತ್ತಿದ್ದು 2018ರ ಜನವರಿ ತಿಂಗಳಲ್ಲಿ ಉದ್ಘಾಟನೆಗೆ ಸಿದ್ಧವಾಗಬಹುದು ಹಾಗೂ ಅದೇ ಸಂದರ್ಭದಲ್ಲಿ 150ನೇ ವರ್ಷಾಚರಣೆಯ ಉದ್ಘಾಟನೆಯನ್ನು ಮಾಡಬಹುದು ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಡಾ. ಎಂ. ವೀರಪ್ಪ ಮೊಯಿಲಿಯವರು 150ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವ ಬಗ್ಗೆ ಈ ಕೆಳಗಿನ ಉದ್ದೇಶಿತ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಬಹುದಾದ ಹಾಗೂ ಪ್ರಗತಿಯಲ್ಲಿರುವ ಕಾರ್ಯಗಳ ಬಗ್ಗೆ ಮಾಹಿತಿ ಹಾಗೂ ಸಲಹೆಗಳನ್ನು ನೀಡಿ, ಈ ಬಗ್ಗೆ ಎಲ್ಲಾ ಸದಸ್ಯರು ಕೂಡಾ ತಮ್ಮ ಸಲಹೆ ಸೂಚನೆಗಳನ್ನು ನೀಡುವಂತೆ ವಿನಂತಿಸಿದರು.

೧ **ಬಯಲು ರಂಗಮಂದಿರ:**

ಕಾಲೇಜಿನ ವಾಣಿಜ್ಯ ಸಂಕೀರ್ಣದ ಹಿಂದುಗಡೆ ಇರುವ ಖಾಲಿ ಜಾಗದಲ್ಲಿ ನಿರ್ಮಾಣ ಮಾಡಲು ಅವಕಾಶವಿದೆ

೨ **ತರಗತಿ ಕೊಠಡಿಗಳ ನಿರ್ಮಾಣ:**

ಡಾ. ದಯಾನಂದ ಪೈ ಕಟ್ಟಡಕ್ಕೆ ಮೊದಲನೆ ಅಂತಸ್ತಿನಲ್ಲಿ ತರಗತಿ ಕೊಠಡಿಗಳ ಕಾರ್ಯವು ಪ್ರಗತಿಯಲ್ಲಿದ್ದು 2018ರ ಫೆಬ್ರವರಿಗೆ ಪೂರ್ಣಗೊಂಡು ತರಗತಿಗಳು ಉಪಯೋಗಿಸಲು ಲಭ್ಯವಾಗಬಹುದು.

೩

೧. ಕಾಲೇಜು ಮಿಸಲೆನಿ ಎನ್ನುವ ಶೀರ್ಷಿಕೆಯಡಿ ಸ್ವರ್ಣ ಸಂಚಿಕೆಯನ್ನು ರವೀಂದ್ರ ಕಲಾ ಭವನ ಉದ್ಘಾಟನೆಯ ಸಂದರ್ಭದಲ್ಲಿ ಬಿಡುಗಡೆಗೊಳಿಸಲು ಅನುಕೂಲವಾಗುವಂತೆ ಸಿದ್ಧಗೊಳಿಸುವುದು.

೨. ಕಾಲೇಜಿನಲ್ಲಿ ವ್ಯಾಸಂಗ ಮಾಡಿರುವ ಹಿಂದಿನ ಹಾಗೂ ಇಂದಿನ ಎಲ್ಲಾ ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಲೇಖನಗಳನ್ನು ‘College Times’ ಎನ್ನುವ ಶೀರ್ಷಿಕೆಯಡಿ ‘Coffee Table Book’ ಒಂದನ್ನು ಬಿಡುಗಡೆ ಮಾಡುವುದು. ಡಾ. ಡಿ. ಕೆ. ಚೌಟ ಇವರು ಕೂಡಾ ಇದನ್ನು ಸಮರ್ಥಿಸಿದರು.

೩. ವಿಶ್ರಾಂತ ಪ್ರಾಂಶುಪಾಲರಾದ ಡಾ. ಸತ್ಯನಾರಾಯಣ ಮಲ್ಲಿಪಟ್ನ ಇವರು ಇದುವರೆಗಿನ ಪ್ರಾಂಶುಪಾಲರ ವರದಿಗಳನ್ನು ಮರು ಮುದ್ರಣಗೊಳಿಸಿ ಪುಸ್ತಕ ರೂಪದಲ್ಲಿ ತಂದಲ್ಲಿ ಕಾಲೇಜಿನ ಸಮಗ್ರ ಇತಿಹಾಸ ಎಲ್ಲರಿಗೂ ಕೈಗೆಟಕುವಂತಾಗುತ್ತದೆ ಎಂದು ತಿಳಿಸಿದರು.

೪ **ಡಾ. ಯು. ಆರ್. ರಂಗನಾಥನ್ ಗ್ರಂಥಾಲಯ ಮತ್ತು ಪತ್ರಾಗಾರ**

ಕಾಲೇಜಿಗೆ ಎಲ್ಲಾ ಆಧುನಿಕ ಸೌಲಭ್ಯಗಳನ್ನೊಳಗೊಂಡ ಗಣಕೀಕೃತ ಗ್ರಂಥಾಲಯ ನಿರ್ಮಾಣ ಮಾಡುವ ಬಗ್ಗೆ ಅಂದಾಜು ವೆಚ್ಚವನ್ನೊಳಗೊಂಡ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಲು ಅಭಿಪ್ರಾಯಿಸಲಾಯಿತು.

೫ **ಆಟದ ಮೈದಾನ ನವೀಕರಣ**
ಆಟದ ಮೈದಾನವನ್ನು ನವೀಕರಣಗೊಳಿಸಲು ಪ್ರಸ್ತಾವನೆಯನ್ನು ತಯಾರಿಸಬಹುದೆಂದು ಅಭಿಪ್ರಾಯಿಸಲಾಯಿತು.

೬ **ಮಧ್ಯಾಹ್ನದ ಊಟದ ಶಾಶ್ವತ ಯೋಜನೆ:**

ಕಾಲೇಜಿನಲ್ಲಿ 2016ರಿಂದ ಪ್ರಾರಂಭಿಸಲಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಮಧ್ಯಾಹ್ನದ ಉಚಿತ ಊಟದ ಯೋಜನೆಗೆ ಎಲ್ಲರಿಂದಲೂ ಅಭೂತಪೂರ್ವ ಮೆಚ್ಚುಗೆ ವ್ಯಕ್ತವಾಯಿತು. ಈ ಯೋಜನೆಯನ್ನು ಶಾಶ್ವತವಾಗಿ ಮುಂದುವರಿಯುವಂತೆ ಮಾಡುವ ಸಲುವಾಗಿ ಡಾ. ಡಿ. ಕೆ. ಚೌಟ, ವಿಶ್ವವಿದ್ಯಾನಿಲಯ ಕಾಲೇಜಿನ ಹಳೆ ವಿದ್ಯಾರ್ಥಿ ಇವರು ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಕ್ರಮಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು. ಹಾಗೆಯೇ ಇನ್ನೂ ಕೆಲವು ಹಳೆ ವಿದ್ಯಾರ್ಥಿಗಳು ಒಂದು ದಿನದ ಊಟದ ವೆಚ್ಚವನ್ನು ಭರಿಸುವುದಾಗಿ ಆಶ್ವಾಸನೆ ನೀಡಿದರು.

೭. **ಬಿಸಿನೆಸ್ ಇನ್‌ಕ್ಯುಬೇಷನ್ ಸೆಂಟರ್**

ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ಬಿಸಿನೆಸ್ ಇನ್‌ಕ್ಯುಬೇಷನ್ ಸೆಂಟರ್ ಪ್ರಾರಂಭಿಸುವ ಸಂಬಂಧವಾಗಿ NABARD, ICIC, HDFC, CRF ಮುಂತಾದ ಪ್ರಮುಖ ಕಂಪನಿಗಳ ಸಹಯೋಗದೊಂದಿಗೆ ಪ್ರಾರಂಭಿಸಲು ಪ್ರಸ್ತಾವನೆಯನ್ನು ಸಿದ್ಧಪಡಿಸಬಹುದೆಂದು ಕೆಲವು ಹಳೆ ವಿದ್ಯಾರ್ಥಿಗಳು ಸಲಹೆ ನೀಡಿದರು.

೮ **ಮಿನಿ ಸಭಾ ಭವನ**

ಮಂಗಳೂರು ವಿಶ್ವವಿದ್ಯಾನಿಲಯದ ವತಿಯಿಂದ ಕಾಲೇಜಿಗೆ ಸಭಾ ಭವನವನ್ನು ನಿರ್ಮಿಸಿಕೊಡುವಂತೆ ಡಾ. ಡಿ. ಕೆ. ಚೌಟ, ವಿಶ್ವವಿದ್ಯಾನಿಲಯ ಕಾಲೇಜಿನ ಹಳೆ ವಿದ್ಯಾರ್ಥಿ ಇವರು ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರಲ್ಲಿ ವಿನಂತಿಸಿದರು. (ರವೀಂದ್ರ ಕಲಾ ಭವನದ 2 ವಿಂಗ್‌ಗಳನ್ನು)

೯ **ಅತಿಥಿ ಗೃಹ**

ವಿಶ್ವವಿದ್ಯಾನಿಲಯ ಕಾಲೇಜು ಕ್ಯಾಂಪಸ್‌ನಲ್ಲಿ ಅತಿಥಿ ಗೃಹ ನಿರ್ಮಾಣ ಮಾಡಬಹುದಾಗಿದ್ದು, ಈ ಬಗ್ಗೆ ಅತಿಥಿ ಗೃಹದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸುವಂತೆ ಮಾನ್ಯ ಕುಲಪತಿಯವರು ತಿಳಿಸಿದರು.

**ಸಭೆಯ ಅಭಿಪ್ರಾಯಗಳು:**

ಮಾನ್ಯ ಶ್ರೀ ಮೋಹನಚಂದ್ರ ನಂಬಿಯಾರ್, ಸಿಂಡಿಕೇಟ್ ಸದಸ್ಯರು, ಮಂಗಳೂರು ವಿಶ್ವವಿದ್ಯಾನಿಲಯ ಇವರು ಮಾತನಾಡಿ 150ನೇ ವರ್ಷಾಚರಣೆಯ ಯೋಜನೆಗಳ ಬಗ್ಗೆ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ

ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡಿದಲ್ಲಿ ಉತ್ತಮ ಪ್ರತಿಕ್ರಿಯೆ ಲಭಿಸಬಹುದು ಎಂದು ತಿಳಿಸಿದರು. ಮುಂದುವರಿಸುತ್ತಾ ಶ್ರೀ ಧರ್ಮಣ್ಣ ನಾಯ್ಕ್, ಅಧ್ಯಕ್ಷರು ಹಳೆ ವಿದ್ಯಾರ್ಥಿ ಸಂಘ ಇವರು ಈ ಬಗ್ಗೆ ಹಳೆ ವಿದ್ಯಾರ್ಥಿ ಸಂಘ ವತಿಯಿಂದ ನವೆಂಬರ್ ತಿಂಗಳಲ್ಲಿ ಒಂದು ಪತ್ರಿಕಾ ಗೋಷ್ಠಿಯನ್ನು ಕಾಲೇಜಿನಲ್ಲಿ ನಡೆಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮೇಲಿನ ವಿಷಯಕ್ಕೆ ಪೂರಕವಾಗಿ ಮಾನ್ಯ ಡಾ. ಎಂ. ವೀರಪ್ಪ ಮೊಯಿಲಿಯವರು ಇದೇ ನವೆಂಬರ್‌ನಲ್ಲಿ ಕಾಲೇಜಿನಲ್ಲಿ ಈ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ ನಂತರ Action Programme Book ಸಿದ್ಧಪಡಿಸಿದಲ್ಲಿ 2018ರ ಜನವರಿಯಲ್ಲಿ ಬೆಂಗಳೂರಿನಲ್ಲಿ ಒಂದು ಪತ್ರಿಕಾ ಗೋಷ್ಠಿ ನಡೆಸಲು ತಾನು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀ ಪಿ. ವಿ. ಮೋಹನ್, ಮಾಜಿ ಸಿಂಡಿಕೇಟ್ ಸದಸ್ಯರು ಹಾಗೂ ಕಾಲೇಜಿನ ಹಳೆ ವಿದ್ಯಾರ್ಥಿ ಇವರು ಮಾತನಾಡಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿಗಳಿಂದ ಪ್ರಚಾರೋಪನ್ಯಾಸ ಮಾಲಿಕೆಗಳನ್ನು ಏರ್ಪಡಿಸುವಂತೆ ತಿಳಿಸಿದರು ಹಾಗೂ ವಿಶ್ವವಿದ್ಯಾನಿಲಯ ಕಾಲೇಜಿನ ಆವರಣದಲ್ಲಿರುವ ಕಾಲೇಜು ಶಿಕ್ಷಣ ಆಯುಕ್ತರ ಕಚೇರಿಯನ್ನು ಬೇರಿ ಕಡೆಗೆ ವರ್ಗಾಯಿಸಿದಲ್ಲಿ ಕಾಲೇಜಿನ ಸ್ಥಳಾವಕಾಶದ ಕೊರತೆ ನೀಗುತ್ತದೆ ಎಂದು ತಿಳಿಸಿದರು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಆರ್. ಪಿ. ನಾಯಕ್, ಅಧ್ಯಕ್ಷರು, ಕೊಂಕಣಿ ಅಕಾಡೆಮಿ ಇವರು ಮಾತನಾಡಿ ಅಕಾಡೆಮಿ ವತಿಯಿಂದ ಒಂದು ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸಲು ಕ್ರಮಕೈಗೊಳ್ಳಲಾಗುವುದು ಹಾಗೂ ಇದಕ್ಕೆ ರೂ. 5.00 ಲಕ್ಷ ಅನುದಾನವನ್ನು ನೀಡಲಾಗುವುದು ಎಂದು ತಿಳಿಸಿದರು. ಸಭೆಯು ಕೊಂಕಣಿ ಅಕಾಡೆಮಿಯ ಈ ನಿರ್ಣಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಈ ಬಗ್ಗೆ ತುಳು, ಬ್ಯಾರಿ, ಕೊಡವ, ಅರೆಭಾಷೆ, ಯಕ್ಷಗಾನ ಮುಂತಾದ ಅಕಾಡೆಮಿಗಳ ಅಧ್ಯಕ್ಷರಿಗೆ ಪತ್ರ ಬರೆದು ಇಂತಹ ಕಾರ್ಯಕ್ರಮವನ್ನು ತಮ್ಮ ಅಕಾಡೆಮಿಯ ಮುಖಾಂತರ ನಡೆಸಿಕೊಡುವಂತೆ ಕೋರಲು ನಿರ್ಣಯಿಸಲಾಯಿತು.

ಕೆಲವು ಹಳೆ ವಿದ್ಯಾರ್ಥಿಗಳು ಮಾತನಾಡಿ ಹಳೆ ವಿದ್ಯಾರ್ಥಿಗಳ ಸದಸ್ಯತ್ವ ಸಂಖ್ಯೆಯು ಪ್ರಸ್ತುತ ಕಡಿಮೆಯಿದ್ದು ಅದನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು ಹಾಗೂ 150ನೇ ವರ್ಷಾಚರಣೆ ಸಂದರ್ಭದಲ್ಲಿ ಹೊರತರಲು ಉದ್ದೇಶಿಸಿದ ಸ್ವರ್ಣ ಸಂಚಿಕೆಯಲ್ಲಿ ಆದಷ್ಟು ಜಾಹೀರಾತುಗಳಿಂದ ಹಣ ಸಂಗ್ರಹಿಸುವಲ್ಲಿ ನಮ್ಮ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು

ಕರ್ನಾಟಕ ಕಾಲೇಜು, ಧಾರವಾಡ ಇದರ 100ನೇ ವರ್ಷಾಚರಣೆಯ ಪ್ರಯುಕ್ತ ಸರಕಾರವು ರೂ.50 ಕೋಟಿ ಅನುದಾನ ಮಂಜೂರು ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ವಿಶ್ವವಿದ್ಯಾನಿಲಯ ಕಾಲೇಜಿನಿಂದಲೂ 150ನೇ ವರ್ಷಾಚರಣೆಯ ಯೋಜನೆಗಳ ಬಗ್ಗೆ ಅನುದಾನ ಕೋರಿ ವಿವರವಾದ ಪ್ರಸ್ತಾವನೆಯನ್ನು ತಯಾರಿಸಿ ಪ್ರಸ್ತಾವನೆಯನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಬಹುದೆಂದು ತಿಳಿಸಿದರು. 150ನೇ ವರ್ಷಾಚರಣೆಯ ಕುರಿತು ಈ ಕೆಳಗಿನ ಸಮಿತಿಯನ್ನು ಕುಲಪತಿಯವರು ಸೂಚಿಸಿದ್ದು, ಸಭೆಯು ಇದಕ್ಕೆ ಒಪ್ಪಿಗೆ ನೀಡಿತು.

| | | |
|---|---|---|
| **01** | **Honorary President** | Dr. M. Veerappa Moily<br>Former Chief Minister, Minister of Corporate Affairs in the Indian Government and Alumni of University College, Mangalore. |

| | | |
|---|---|---|
| **02** | **President** | Prof. K. Byrappa, Hon'ble Vice chancellor Mangalore University |
| **03** | **Patrons** | Sri B. Ramanatha Rai, Dist. Incharge Minister, Dakshina Kannada. |
| | | Sri. U.T. Khadar, Minister, Mangalore |
| | | Sri. J. R. Lobo, MLA, Mangalore |
| | | Sri. Ivan D'souza, Chief Whip in KLC |
| | | Sri. Nalin Kumar Kateel, MP |
| | | Capt.Sri. Ganesh Karnik, MLC, Mangalore |
| | | Sri. Vinaya Kumar Sorake, MLA, Kaupu |
| **04** | **Vice Presidents** | Dr. Dayananda Pai, Bangalore |
| | | Dr. D.K. Chowta, Old Student, Bangalore |
| | | Sri. Dharmanna Naik, President, Alumni Asso. |
| | | Smt. Anupama Ananthamurthy, President, PTA, UCM |
| | | Sri. Govinda Naik, Rtd. Principal, UCM |
| | | Dr. Hareesh A., Dean, Faculty of Science, UCM |
| | | Dr. Ammalu Kutty, "" Arts, UCM |
| | | Smt. Sunanda U., "" Commerce, UCM |
| **05** | **Secretary** | Prof. K.M. Lokesh, Registrar, Mangalore University |
| **06** | **Coordinator/Secretary Convener** | Dr. Udaya Kumar M.A, Principal, UCM |
| **07** | **Joint Secretaries** | Dr. Subhashini Shrivathsa, Principal, University Evening College, Mangalore |
| | | Sri. Dayakar B., Physical Director, UCM |
| | | Smt. Meena S.K., Asso.Professor, UCM |
| | | Dr. Latha A Pandit, Asso.Professor, UCM |
| | | Dr. K.M. Usha, " " " " |
| | | Dr. Ganapathi Gowda, " " " " |
| | | Dr. Jayavantha Nayak, " " " " |
| | | Dr. Nagarathna Rao, " " " " |
| | | Sri. Subramanya Bhat, " " " " |
| | | Dr. B.M. Ramakrishna, " " " " |
| | | Dr. Veerabhadrappa, " " " " |
| | | |
| **08** | **Executive Committee** | Members of the Syndicate, Mangalore University |
| | | Dr. Chethana U, Asso.Professor, UCM |
| | | Dr. Rathnavathi T. " " " " |
| | | Smt. Mahendramani Rao, " " " " |
| | | Dr. Rajalaxmi N.K. " " " " |
| | | Dr. Shobha, " " " " |

| | | |
|---|---|---|
| | | Smt. Rajeshwari, “ ” “ ” |
| | | Dr. Laxmana “ ” “ ” |
| | | Dr. Kumara Subramnya Bhat “ ” “ ” |
| | | Dr. D. P. Angady, “ ” “ ” |
| | | Dr. M.M. Meenakshi “ ” “ ” |
| | | Dr. Nagarathna K.A. “ ” “ ” |
| | | Dr. Bharathi Prakash, “ ” “ ” |

ಪ್ರಾಂಶುಪಾಲರಾದ ಡಾ. ಉದಯ ಕುಮಾರ್ ಎಂ. ಎ. ಇವರು ಮಾತನಾಡುತ್ತಾ, ವಿಶ್ವವಿದ್ಯಾನಿಲಯ ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ಹಾಗೂ ಆಡಳಿತ ವರ್ಗದವರಿಗೆ ಕಾಲೇಜಿನ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು, ಹಾಗೂ ಸಭೆಗೆ ಆಗಮಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಿದ ಎಲ್ಲಾ ಗಣ್ಯರಿಗೂ ಧನ್ಯವಾದಗಳನ್ನು ಸಲ್ಲಿಸಿದರು.

ಡಾ. ಜಯವಂತ ನಾಯಕ್, ಸಂಯೋಜಕರು, ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು ಇವರು ಸಭೆಗೆ ಆಗಮಿಸಿದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು. ಡಾ. ಲತಾ ಎ. ಪಂಡಿತ್, ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು ಇವರು ಕಾರ್ಯಕ್ರಮ ನಿರೂಪಣೆ ಮಾಡಿದರು.

**ಪ್ರಾಂಶುಪಾಲರು.**